ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರೀಯವರ ಕೋರ್ಟ್‌ನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 5.

ಮೃತಪಟ್ಟ ಲಕ್ಷ್ಮಿದೇವಮ್ಮನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ನರಸಿಹ್ಮಭಟ್ಟರು ಮೃತಪಟ್ಟ ಸದರೀ ಲಕ್ಷ್ಮಿದೇವಮ್ಮನವರಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಪುಂಜರಾಬಾದ್ ತಾಲ್ಲೂಕು ಯಳೂರು ಹೋಬಳಿ ಕೊಂತ್ಲಾಪುರದ ಸ್ಥಳದ ಸದರೀ ನರಸಿಹ್ಮಭಟ್ಟರು ಸದರೀ ವಾಸಸ್ಥಳಾಗಿ ಮೃತಪಟ್ಟ ಲಕ್ಷ್ಮಿದೇವಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ 400 ರೂಪಾಯಿಗಳ ಸೂಲವನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನರಸಿಹ್ಮಭಟ್ಟರ ಅರ್ಜೀಯನ್ನು 1887ನೇ ಇಸವಿ ಫಿಬ್ರುವರೀ ತಿಂಗಳು ತಾರೀಖು 15ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಲಕ್ಷ್ಮಿದೇವಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್‌ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಜನವರೀ ತಿಂಗಳು 11ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1887ನೇ ಇಸವಿ ಅರ್ಜೀ ನಂಬರ್ 9.

ಮೃತಪಟ್ಟ ಕೂರ್ಮ್ಯೆಯನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಹಾಲಪ್ಪನವರು, ಮೃತಪಟ್ಟ ಸದರೀ ಕೂರ್ಮ್ಯೆಯನವರಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಹೊಸ ಅಗ್ರಹಾರದ ಸ್ಥಳದ ಸದರೀ ಹಾಲಪ್ಪನವರು ಸದರೀ ವಾಸಸ್ಥರಾಗಿ ಮೃತಪಟ್ಟ ಕೂರ್ಮ್ಯೆಯನವರ ಜಿಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿಗಳ ಸೂಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಹಾಲಪ್ಪನವರ ಅರ್ಜೀಯನ್ನು 1887ನೇ ಇಸವಿ ಫಿಬ್ರುವರೀ ತಿಂಗಳು ತಾರೀಖು 15ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೂರ್ಮ್ಯೆಯನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಜನವರೀ ತಿಂಗಳು 13ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ಹೇಮಾಜಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಮೈಸೂರು ಸಬ್ ಜಡ್ಜ್‌ರೀಯವರ ಕೋರ್ಟ್‌ನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ನಂಜನಗೂಡು ತಾಲ್ಲೂಕು ಯೇಚಿಗಹಳ್ಳಿಯಲ್ಲಿರುವ ಕಿವಾಚಾರದ ಅಜ್ಜೇಗೌಡನ ಮಗ ಪಟೇಲ ಲಿಂಗೇಗೌಡನ ವಿಷಯದಲ್ಲಿ—

ಸ್ಯ 1886ನೇ ಇಸವಿ ದಿವಾಳಿ ಕೇಸ್ ನಂಬರ್ 32.

ಹುಕ್ಕುಂ.

ಮೇಲ್ಕಂಡ ಲಿಂಗೇಗೌಡನೆಂಬವನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಶವು, ಈ ಕೋರ್ಟು ರೂಬರೂ ಅರ್ಜೀದಾರನಾದ ಲಿಂಗೇಗೌಡನ ಪರವಾಗಿ ಅಡ್ವೊಕೇಟ್ ಮೆ|| ರಾಘವಾಚಾರ್ರು ಹಾಜರು ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮ್ಮಗೆ ಈ ದರ್ಯಾಫ್ತ್‌ಗೆ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—1ನೇ ಮಲ್ಲಯ್ಯ, 2ನೇ ನಾರಣಪ್ಪ, 3ನೇ

ಶಿವಯ್ಯ, 4ನೇ ಚನ್ನಬಸಪ್ಪ, 5ನೇ ನಂಜಪ್ಪಯ್ಯ, 6ನೇ ವೀರಭದ್ರಯ್ಯ, 7ನೇ ಮರಿಕಾಳಿ, 8ನೇ ನಂಜಪ್ಪ, 9ನೇ ತಿಮ್ಮಯ್ಯಶೆಟ್ಟಿ ವಬ್ಬ 10ನೇ ವರ್ಧಣಯ್ಯ, 11ನೇ ಅಂಜೆ ದುನಿಯ್ಯ, 12ನೇ ಪ್ಲೀಡರ್ ರಂಗಂಣ.

ಸಿವಿಲ್ ಪ್ರೊಸೀಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಪಟೇಲ ಲಿಂಗೇಗೌಡನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯುದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1886ನೇ ಇಸವಿ ಡಿಸಂಬರ್ 22ನೇ ತಾರೀಖಿನಲ್ಲಿ ಈ ಕೋರ್ಟು ಮೊಹರಿ ನಮ್ಮ ದಸ್ತಖತ್‌ನೀ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಸೊಬಲಗು.	ಯಾವಾಗ ದೇಣಿ ಹುಟ್ಟಿದ್ದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇ ನಾದರೂ ಇದ್ದರೆ.	ಗುಣ.
1	ನಂಜನಗೂಡು ಪ್ಲೀಡರ್ ರಂಗಂಣ ..	ನಮೂದಿಲ್ಲ.	..	ಡಿಕ್ರೀ ಬಾಬತು.	

ದಿವಾಳಿಯಾದ ಡಿಕ್ರೀ ದೇಣೇದಾರ ಮೈಸೂರು ಯಿಟ್ಟಿಗೆ ಗೂಡಿನಲ್ಲಿರುವ ಪಾಪಮ್ಮನ ವಿಷಯದಲ್ಲಿ—

ಸ್ಯ 1886ನೇ ಇಸವಿ ದಿವಾಳಿ ಕೇಸ್ ನಂಬರ್ 42.

ಹುಕ್ಕುಂ.

ಮೇಲ್ಕಂಡ ಪಾಪಮ್ಮನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು, ಈ ಕೋರ್ಟು ರೂಬರೂ ಅರ್ಜೀದಾರಳಾದ ಪಾಪಮ್ಮನು ಖುದ್ದು ಮತ್ತು ಸದರೀಯವಳ ಲೇಣೇದಾರ್ರಾದ 1ನೇ ಕಾಳೇಗೌಡನ ಕಡೆ ವೆ|| ಯರ್. ಸುಬ್ಬರಾಯರು, 2ನೇ ಕಾಳಾಚಾರೀಕಡೆ ವೆ|| ಅಡ್ವೊಕೇಟ್ ನರಶಿಂಗರಾಯರು, 4ನೇರ ತರಫ್ ನೀಲಕಂಠಮೊದಲಿ, 5ನೇ ಚಂದ್ರಶೇಖರ ಮೊದಲಿ ಇವರಕಡೆ ವೆ|| ಯರ್ ಸುಬ್ಬರಾಯರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತ್ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ, ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—3ನೇ ಮುತ್ತಸಾಮಿ.

ಸಿವಿಲ್ ಪ್ರೊಸೀಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಯಿಟ್ಟಿಗೆ ಗೂಡು ಪಾಪಮ್ಮನು ಹೊಂದುವದಕ್ಕೆ ಹಕ್ಕುದಾರಳಾಗುವದರ ಮೂಲಕ ದಿವಾಳಿಯಾದವಳೆಂದು ತೀರ್ಮಾನಿಸಲ್ಪಟ್ಟಿರುತ್ತದೆಯೂಗಿ ಸದರೀ ದಿವಾಳಿಯಾದವಳನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟುನಿರ್ಬಂಧಪಡುವ ಜವಾಬುದಾರಿಯಿಂದ ಸಹ ಅವಳನ್ನ ನಿಖಾಲಸ್ ಮಾಡಲಾಗಿರುತ್ತೆಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

1886ನೇ ಇಸವಿ ಡಿಸಂಬರ್ ತಿಂಗಳು 22ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಂ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರ್.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಸೊಬಲಗು.	ಯಾವಾಗ ದೇಣಿ ಹುಟ್ಟಿದ್ದು.	ದೇಣೇಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ	ಗುಣ.
1	ಮೈಸೂರು ಯಿಟ್ಟಿಗೆ ಗೂಡಿನಲ್ಲಿರುವ ಕಾಳೇಗೌಡ.	175–3–10	..	ಡಿಕ್ರೀ ಬಾಬತು.	

ದಿವಾಳಿಯಾದ ಡಿ') ದೇಣೇದಾರ ಮೈಸೂರು ಲಷ್ಕರ್ ವೊಹಲೆಯಲ್ಲಿ ಇರುವ ಗುಲಾಂ ಹುಸೇರ್ಖಾ ಮಗ ಗುಲಾಂ ಮಹಮ್ಮತ್ ಖಾನ ವಿಷಯದಲ್ಲಿ—

ಸ್ ೧೮೮೬ನೇ ಇಸವಿ ದಿವಾಳಿ ಕೇಸ್ ನಂಬರ್ 224.

ಹುಕ್ಕುಂ.

ಮೇಲ್ಕಂಡ ಗುಲಾಂ ಮಹಮ್ಮತ್ ಖಾನನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು, ಈ ಕೋರ್ಟು ರೂಬರೂ ಅರ್ಜೀದಾರನಾದ ಗುಲಾಂ ಮಹಮ್ಮತ್ ಖಾನ್ ಖುದ್ದು ಹಾಜರ್ ವರ್ಯಾಫ್ತಿ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ವರ್ಯಾಫ್ತಿ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು ಯಾರೆಂದರೆ—1 ನವಾಬ್ ಯಿಬರಾಹಿಂಖಾನ್ ಬಿನ್ದುರಿ 2ನೇ ಮಹಮ್ಮದ್ ಬಿನ್ದುರಿ ತಂದೆ ಗುಲಾಂಮುಲ್ಕ್ ಸಾಬಿ.

ಸಿವಿಲು ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲಸನ್ನ ಸದರೀ ಗುಲಾಂ ಮಹಮ್ಮತ್ ಖಾನನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿವೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಇಸ್ತರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬುದಾರಿಯಿಂದ ಸಹ ಅವನ್ನ ನಿರಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ ೧೮೮೭ನೇ ಇಸವಿ ಜನವರೀ 12ನೇ ತಾರೀಖಿನಲ್ಲಿ ಈ ಕೋರ್ಟು ವೊಹರ್ ನಮ್ಮ ದಸ್ತಖತ್‌ನೀಲೇ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ್.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಹಿಂಬಾಲಿಗೆ.	ಯಾವಾಗ ದೆಪ್ಪಿ ಕುದರು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೀ ನಾದರೂ ಇದ್ದರೆ.	ಷರಾ.
1	ಮೈಸೂರು ಮಂಡಿವೊಹಲೇಲಿರುವ ಮಹಂಮದ್ ಬಿರ್ತುರಿ ತಂದೆ ಗುಲಾಂ ಮುಲ್ಕ್.	135–5–0	..	ಡಿಕ್ರಿ ಬಾಬತು.	

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ.

ಗೈರ್ವಿಲಾ ಅದ

ಬಲಭಾಗದ ಕರೆನ್ಸಿನೋಟ್‌ಗಳ

ನಂಬರ್	ಸರ್ಕಲ್	ಕ್ರಯ.	
B. 90—30886	,,	ರೂ. 20	ಹಕ್ಕುದಾರ—ಕ್ರೋಸೆಟ್ಟಿ ಕಸಬು ಸ್ಟ್ಯಾಂಪ್‌ವೆಂಡರ್ ಭೀಮರಾವ್.
B. 82—91553	,,	,, 20	

ಫ್ರೆಂಚ್‌ರಾಕ್ಸ್ ಸಬ್ ಡಿವೀರ್ಜ.

ತಾರೀಖು 8ನೇ ಜನವರೀ 1887.

ಫ್ರೆಂಚ್‌ರಾಕ್ಸ್ ಸಬ್ ಡಿವಿರ್ಜ ಅತ್ತಿಕುಪ್ಪ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಈ ಕೆಳಗೆ ನಮೂದಿಸುವ ದಸ್ತಾವೇಜನ್ನು ಕ್ರಮವಾದ ವಾರಸ್ದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯತು ವೊಂದು ತಿಂಗಳ ನೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುತ್ತೆ.